"ಆಯ್ತು ಮಾರಾಯ್ತೀ, ನೀ ಹೇಳಿದೆ ಅಂದ್ಮೇಲೆ ಮುಗೀತು..."

ಅಪ್ಪ ಮುಂಚೇಕಡೆಯ ಮೇಜಿನ ಮೇಲೆ ಜಾತಕದ ಪುಸ್ತಕ ತೆಗೆದಿಟ್ಟುಕೊಂಡು ಮಗಳ ಜಾತಕದ ಹತ್ತಾರು ಪ್ರತಿ ಮಾಡುತ್ತಾ, ಮಗಳು ತನ್ನ ಕೋಣೆಯ ಮಬ್ಬುಗತ್ತಲಲ್ಲಿ ಮನದ ಮೋಹದ ಭಾವನೆಗಳಿಗೆ ಅಕ್ಷರರೂಪ ಕೊಡುತ್ತಾ, ಅಲ್ಲಿ ಮೋಹನನೂ ಇದೇ ಕೆಲಸದಲ್ಲಿ ನಿರತನಾಗಿರಬಹುದೆಂಬ ಅರಿವಿನಿಂದ ಕಾವೇರಿ ನವಿಲುಗರಿಯಿಂದ ಹಗೂರಕ್ಕೆ ಕೆನ್ನೆ ನೇವರಿಸಿದಂತಾ ನವಿರು ಭಾವನೆಯಿಂದ ಬೆಚ್ಚಗಾಗುತ್ತಿದ್ದಳು. ಬೆಳಗಿನ ಹೊತ್ತು ಹೂ ಕುಯ್ದುಕೊಂಡು ಬರುವಾಗ ಮಲ್ಲಿಗೆ ಚಪ್ಪರದ ಬಳಿ ಪ್ರೇಮಸಂದೇಶವೊಂದು ಉದುರಿ ಬೀಳುತ್ತಿತ್ತು. ಅವಳು ಅಲ್ಲಿಗೆ ಬರುವುದಕ್ಕೆ ಮುನ್ನವೇ ಮೋಹನನ ಅಂತರಂಗ ನಿವೇದನೆ ಪತ್ರರೂಪದಲ್ಲಿ ಅಲ್ಲಿ ಪ್ರತ್ಯಕ್ಷವಾಗಿರುತ್ತಿದ್ದು ಅವಳು ತನ್ನ ದಾವಣಿಯ ಮರೆಯಲ್ಲಿ ಅದನ್ನು ಕಾಪಿಟ್ಟುಕೊಳ್ಳುತ್ತಿದ್ದಳು. ಕಾಗದದ ಆ ತುಣುಕೇ ಮೋಹನ ಎನ್ನುವಂತೆ ಅವಳ ಎದೆಬಡಿತ ತೀವ್ರವಾಗುತ್ತಿತ್ತು. ಹೂವಿನ ಹರಿವಾಣ ಒಳಗಿಟ್ಟು ಕಾಲು ತೊಳೆದು ಬರುವ ನೆಪದಲ್ಲಿ ಬಚ್ಚಲು ಬಾಗಿಲು ಹಾಕಿಕೊಂಡು ಮೋಹನನ ಅಂತರಂಗವನ್ನು ತನ್ನ ಅಂತರಂಗಕ್ಕೆ ಆವಾಹಿಸಿಕೊಳ್ಳುತ್ತಿದ್ದಳು. ಮುದಗೊಳ್ಳುತ್ತಿದ್ದಳು. ಮತ್ತೇರುತ್ತಿದ್ದಳು. ಈ ಕಳ್ಳವ್ಯವಹಾರ ಯಾರಿಗೂ ಗೊತ್ತಾಗದಂತೆ ನಿರ್ಜೀವ ಕಾಗದದ ತುಣುಕು ಬಚ್ಚಲೊಲೆಯ ಬೆಂಕಿಯಲ್ಲಿ ಉರಿದು ಬೂದಿಯಾಗುತ್ತಿತ್ತು. ಪರಸ್ಪರ ಸಾಮೀಪ್ಯ ತಂದುಕೊಡಬಹುದಾದ ಸುಖಕ್ಕಿಂತಾ ಪತ್ರ ವಿನಿಮಯದಲ್ಲಿ ತೆರೆದುಕೊಳ್ಳುತ್ತಿದ್ದ ನಿವೇದನೆ ಹೆಚ್ಚೆಚ್ಚು ಆಪ್ತವಾಗುತ್ತಾ, ಪರಸ್ಪರ ಒಲವನ್ನು ದ್ವಿಗುಣಗೊಳಿಸುತ್ತಾ, ದಿನೇದಿನೇ ಪ್ರೇಮಿಗಳನ್ನು ನಿಕಟವಾಗಿಸುತ್ತಿದ್ದಂತಾ ಕಾಲದಲ್ಲಿ ಅಪ್ಪ ಅವಳ ಜಾತಕ ಹೊರಡಿಸಿಯಾಗಿತ್ತು. ಚಡಪಡಿಸತೊಗಿದ್ದಳು ಕಾವೇರಿ. ಮೋಹನನನ್ನು ಬಿಟ್ಟು ಬೇರೊಬ್ಬರೊಡನೆ ಬದುಕು ಹಂಚಿಕೊಳ್ಳಲಾರೆನೆಂಬ ಕನವರಿಕೆ ಶುರುವಾಗಿತ್ತು. ವಿನಿಮಯವಾಗುವ ಪತ್ರಗಳಲ್ಲಿ ಭೇಟಿಯ ಕುರಿತಾದ ತುಡಿತಗಳು ಪ್ರಸ್ತಾಪವಾಗಿ, ಒಬ್ಬರನ್ನೊಬ್ಬರು ಸಂಧಿಸುವ ಉತ್ಕಟೇಚ್ಛೆ ಒಲಿದ ಹೃದಯಗಳನ್ನು ಕಾಡತೊಡಗಿತ್ತು. ರಾತ್ರಿಯ ಊಟದ ನಂತರ ಯಾವತ್ತಿನ ಪದ್ಧತಿಯಂತೆ ಎಂಜಲೆಲೆಯನ್ನು ಎತ್ತಿಕೊಂಡು ಗೊಬ್ಬರದ ಗುಂಡಿಗೆ ಅವಳು ಬಿಸಾಕಿ ಬರುವ ಹೊತ್ತಿಗೆ ಹೊಂಚು ಹಾಕಿ ಒಮ್ಮೆ ಕಾದು ನಿಂತಿದ್ದ ಅವಳ ಪ್ರಿಯತಮ. ಅಮಾವಾಸ್ಯೆಯ ಹತ್ತಿರದ ದಿನಗಳಿರಬೇಕು. ಕದ್ದಿಂಗಳು. ಎಡಗೈಯಲ್ಲಿ ಬ್ಯಾಟ್ರಿ ಹಿಡಿದು, ಬಲಗೈಯಲ್ಲಿ ಎಂಜಲು ಜೋರದಂತೆ ಮಡಿಸಿ ಹಿಡಿದ ಉಂಡ ಬಾಳೆಲೆಯ ಕಂತೆ ಹಿಡಿದು, ಅವಳು ಗೊಬ್ಬರದ ಗುಂಡಿಗೆ ಎಲೆಗಳನ್ನೆಸೆದು ಹಿಂದಿರುಗುವಷ್ಟರಲ್ಲಿ ಕಿವಿಯ ಹಿಂಬದಿಗೆ ಬಿಸಿಯುಸಿರು ಸೋಕಿದಂತಾಗಿ ಚಿಟ್ಟನೆ ಚೀರಲಿದ್ದವಳ ಬಾಯಿಯನ್ನು ಬಲಗೈಯಿಂದ ಒತ್ತಿ ಹಿಡಿದಿದ್ದ ಮೋಹನ. "ನಾನು... ನಾನು..." ಎಂದು ತೊದಲಿದ್ದ. ಬ್ಯಾಟ್ರಿಯ ಬೆಳಕನ್ನು ನಂದಿಸಿ ಮರವಟ್ಟು ನಿಂತಿದ್ದಳು ಕಾವೇರಿ. "ಹುಚ್ಚಾ ನಿಮ್ಗೆ?" ಏದುಸಿರು ತಹಬಂದಿಗೆ ಬರುತ್ತಿದ್ದಂತೆ ಪಿಸುದನಿಯಲ್ಲಿ ಕೇಳಿದ್ದಳು.

"ಯಾವತ್ತು ನೀವು ನನ್ನ ಕೋಣೆಯ ಬಾಗ್ಲಲ್ಲಿ ಬಂದು ನಿಂತ್ಕೊಂಡ್ರೋ ಆಗ್ಲೇ ಹಿಡೀತು ಹುಚ್ಚು..." ಅವನು ತೋಳಿನಿಂದ ಅವಳ ಭುಜ ಬಳಸಿದ್ದ. ಅವಳು ಇನ್ನೇನು? ಕುಸಿದು ಬೀಳುತ್ತಾಳೆನ್ನುವಷ್ಟು ಕಂಪಿಸಿ ಹೋಗಿದ್ದಳು.

"ಬಿಡಿ ನನ್ನ, ಅಣ್ಣ ನೋಡಿದ್ರೆ ನಿಮ್ಮನ್ನ ಸುಮ್ನೆ ಬಿಡಲ್ಲ. ನನ್ನನ್ನೂ..." ಅವನ ಕೈ ಹಿಡಿತ ಸಡಿಲವಾಗಿತ್ತು. ಅವಳ ನೆತ್ತಿಯ ಮೇಲೊಂದು ಪ್ರೇಮಮುದ್ರೆ. ಅದರ ಬಿಸಿ ನೆತ್ತಿಯ ಮೂಲಕ